ನನ್ನನ್ನು ತ್ಯಜಿಸುವ ತೀರ್ಮಾನ ತೆಗೆದುಕೊಂಡಳು ಎಂದು ಒಂದು ಕ್ಷಣ ಅನ್ನಿಸಿತು.

ನಾನು ನೀನಾಳ ರೋಗದ ಬಗ್ಗೆ ಸಹೋದರರಾದ ವಿಲಿಯಮ್ ಮತ್ತು ಅಲ್ಬರ್ಟ್‌ಗೆ ವಿಷಯ ತಿಳಿಸಿದಾಗ ಅವರು ಹೇಳಿದ್ದರು, 'ಅವಳು ನಿನ್ನನ್ನು ತ್ಯಜಿಸಿ ನಿನ್ನ ಬಗ್ಗೆ ಕೃಪೆ ತೋರಿದ್ದಾಳೆ.'

ವಿಲಿಯಮ್ ನೆನಪಿಸಿಕೊಂಡು ಹೇಳಿದ, 'ನಿನ್ನ ಹುಟ್ಟುಹಬ್ಬದ ಸಮಾರಂಭದಲ್ಲೂ ಅವಳ ಆರೋಗ್ಯ ಸರಿಯಿರಲಿಲ್ಲ. ತನಗೆ ಭಯಂಕರ ತಲೆನೋವು ಎಂದು ಹೇಳಿದ್ದಳು'.

ನನ್ನ ಐವತ್ತನೆಯ ಹುಟ್ಟುಹಬ್ಬವನ್ನು ಮತ್ತೆ ಸ್ಮರಿಸಿಕೊಂಡೆ: ನಾನು ಮತ್ತು ನೀನಾ ನಮ್ಮ ಬೆಡ್ ರೂಮಿನಲ್ಲಿದ್ದೇವೆ; ಅವಳು ತನ್ನ ತಲೆಹಿಡಿದು ಮಂಚದಲ್ಲಿ ಕೂತಿದ್ದಾಳೆ, ಅವಳು ದಣಿದವಳಂತೆ ತೋರುತ್ತಿದ್ದಾಳೆ. ನಾನು ಅವಳೆದುರಿಗೆ ನಿಂತು ಸಿದ್ಧನಾಗುತ್ತಿದ್ದೇನೆ, ಅವಳು ನನ್ನನ್ನೇ ನೋಡುತ್ತಿದ್ದಾಳೆ. ನಾನು ನನ್ನ ಕಿಲ್ಟ್ ಧರಿಸಲು ಅಣಿಯಾದಾಗ ಅವಳು ತಡೆದು ಹೇಳಿದಳು, 'ಕಿಲ್ಟ್ ಧರಿಸಬೇಡಿ. ಈ ಸೂಟನ್ನು ಧರಿಸಿ...' ಅವಳು ನನಗೆ ಹುಟ್ಟುಹಬ್ಬದಂದು ಉಡುಗೊರೆಯಾಗಿ ಕೊಟ್ಟ ಹೊಸ ಸೂಟನ್ನು ನನ್ನೆಡೆಗೆ ಚಾಚಿದಳು. ಅದನ್ನು ಅವಳು ದುಬಾರಿ ಸ್ಟೋರ್ 'ಮೆನ್ ವೇರ್ ಹೌಸ್'ನಿಂದ ಖರೀದಿಸಿದ್ದಳು.

'ನೀವು ಸೂಟ್ ಧರಿಸಿ, ಟೈ ಹಾಕಿಕೊಳ್ಳಿ. ನೀವು ಸೂಟ್ ಮತ್ತು ಟೈಯಲ್ಲಿ ತುಂಬಾ ಸ್ಮಾರ್ಟ್ ಆಗಿ ಕಾಣಿಸುವಿರಿ' ನೀನಾ ಮೆಲ್ಲನೆ ಮುಗುಳ್ನಗುತ್ತಾ ಹೇಳಿದಳು.

ಆದರೆ ನಾನು ನನ್ನ ಕಿಲ್ಟ್ ಧರಿಸಲು ನಿರ್ಧರಿಸಿದ್ದೆ. ನೀನಾ ಮತ್ತೊಮ್ಮೆ ಆಗ್ರಹಿಸಿದರೂ ನಾನು ಒಪ್ಪಲಿಲ್ಲ. ಅವಳು ರೇಗಿ ಹೇಳಿದಳು,

'ನೀವು ಈ ಡ್ರೆಸ್‌ನಲ್ಲಿ ಬುಡಕಟ್ಟು ಜನಾಂಗದವರಂತೆ ಕಾಣ್ತೀರಿ'.

ನಾನು ಅವಳ ಈ ಮಾತಿಗೆ ರೇಗಿ ಕಿರುಚಿದೆ, 'ಲೆಟ್ ಅಸ್ ಸೆಪರೇಟ್! ನಾನು ಗುಗ್ಗುವಿನಂತೆ ಕಂಡರೆ, ನೀನು ನನ್ನೊಂದಿಗೆ ಇರ್ಬೇಡ. ಸ್ಮಾರ್ಟ್ ಮನುಷ್ಯನನ್ನು ಹುಡುಕಿಕೋ' ಅವಳಿಗೆ ನಿರಾಸೆಯಾಯಿತು. ನಾನು ಕಿರುಚುತ್ತಲೇ ಇದ್ದೆ. ತುಂಬಾ ಹೊತ್ತು ಅವಳನ್ನು ಯದ್ವಾತದ್ವಾ ನಿಂದಿಸಿದೆ. ಅವಳನ್ನು ಪಿಶಾಚಿ ಎಂದೆ. ಅವಳು ತನ್ನ ಕಿವಿಗಳನ್ನು ಮುಚ್ಚಿಕೊಂಡಳು. ನಾನು ಸಿಡಿಮಿಡಿಗುಟ್ಟುತ್ತಾ ಕೆಳಗೆ ಹೋದೆ.

ಅವಳು ಕೆಳಗೆ ಬರಲಿಲ್ಲ. ಅತಿಥಿಗಳೆಲ್ಲರೂ ಬಂದರು. ಎಲ್ಲರೂ ಅವಳ ಬಗ್ಗೆಯೇ ಕೇಳುತ್ತಿದ್ದರು. ಅವಳನ್ನು ಕರೆಯಲು ಕರೀನಾ ಮತ್ತು ಜೊಹಾನಾ ಅನೇಕ ಬಾರಿ ಅವಳ ಕೋಣೆಗೆ ಹೋದರು. ತುಂಬಾ ಹೊತ್ತಿನ ನಂತರ ಅವಳು ಮೆಟ್ಟಿಲುಗಳಿಂದ ಇಳಿಯುತ್ತಾ ಹಾಲಿಗೆ ಬಂದಳು. ಅವಳು ಧರಿಸಬೇಕೆಂದಿದ್ದ ಉಡುಪುಗಳನ್ನು ಧರಿಸಿರಲಿಲ್ಲ. ಬಹುಶಃ ಅವಳ ತಲೆನೋವು ವಾಸ್ತವವಾಗಿಯೂ ಹೆಚ್ಚಿತ್ತು. ಅವಳು ತಲೆನೋವು ಎಂದು ಹೇಳುತ್ತಲೇ ಇದ್ದಳು. ನನ್ನನ್ನು ಹೊರತುಪಡಿಸಿ ಎಲ್ಲರೂ ಅವಳ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ನೀನಾ ನನ್ನ ಹುಟ್ಟುಹಬ್ಬದ ಸಮಾರಂಭವನ್ನು ಹಾಳು ಮಾಡಲು ಕಾತರಳಾಗಿದ್ದಾಳೆಂದು ನನಗೆ ಅನ್ನಿಸುತ್ತಿತ್ತು. ಆದರೆ ಈಗ ಅವಳಿಗೆ ವಾಸ್ತವವಾಗಿಯೂ ತಲೆನೋವು ಹೆಚ್ಚಾಗಿರಬಹುದು ಎಂದು ಅನ್ನಿಸುತ್ತಿತ್ತು. ನಂತರ ಅವಳ ತಾಯಿ ಸಹ, ಅಂದು ಬೆಳಿಗ್ಗೆ ನೀನಾಳ ಆರೋಗ್ಯ ಸರಿಯಿರಲಿಲ್ಲ, ಅವಳಿಗೆ ವಾಂತಿ ಸಹ ಆಗಿತ್ತು, ಆದರೆ ಅದನ್ನು ನಿನಗೆ ಹೇಳಿ ನಿನ್ನ ಮೂಡ್ ಹಾಳು ಮಾಡಲು ಅವಳಿಗೆ ಇಷ್ಟವಿರಲಿಲ್ಲ ಎಂದು ಹೇಳಿದ್ದರು.

'ಅವಳು ನನ್ನ ಮೂಡನ್ನು ತುಂಬಾ ಹಾಳು ಮಾಡಿದಳು' ಎಂದು ನೀನಾಳ ತಾಯಿಗೆ ಹೇಳಿದ್ದೆ.

'ಅಲ್ಲಿಯವರೆಗೆ ನಿಮ್ಮಿಬ್ಬರ ನಡುವಿನ ಸಂಬಂಧ ತುಂಬಾ ಹದಗೆಟ್ಟಿತ್ತು' ಶೀಲಾ ದೇವಿಯವರು ಮೆಲ್ಲನೆ ಉಸುರಿದರು.

ಬ್ರಹ್ಮಾಂಡ ಸದಾ ನಮ್ಮೊಂದಿಗೆ ಮಾತನಾಡುತ್ತದೆ, ಸ್ವಲ್ಪ ನಿಲ್ಲಿ, ನಿಮ್ಮ ಸುತ್ತಮುತ್ತ ನೋಡಿ, ಮನನ ಮಾಡಿ, ನೀವು ನೋಡುತ್ತಿರುವುದು ಮತ್ತು ಅರ್ಥ ಮಾಡಿಕೊಳ್ಳುತ್ತಿರುವುದು ವಾಸ್ತವಿಕತೆಗಿಂತ ಹೆಚ್ಚಿದೆ ಎಂಬ ಸಣ್ಣ ಪುಟ್ಟ ಸಂದೇಶಗಳನ್ನು ಕಳುಹಿಸುತ್ತದೆ.

ಕ್ಯಾನ್ಸರ್‌ನ ಘಾತಕ ಗಂಟು ಅವಳ ದೇಹದಲ್ಲಿ ಎಂದೋ ತನ್ನ ನೆಲೆಯೂರಿತ್ತು, ಆಗಲೇ ಅವಳು ನನ್ನೊಂದಿಗೂ ಇದ್ದಳು. ಆದರೆ ಅದು ಹರಡಿ ಅವಳ ಮೆದುಳಿಗೆ ಹೋಗಿ ಅವಳ ಶಾರೀರಿಕ ಸಂತುಲನೆಯನ್ನು ಏರುಪೇರು ಮಾಡಿದಾಗ ಅವಳಿಗೆ ಈ ಬಗ್ಗೆ ತಿಳಿಯಿತು. ಅತೀವ ತಲೆನೋವು, ವಾಂತಿ, ಅಶಾಂತತೆ, ಹಸಿವೆಯಾಗದಿರುವುದು, ನಡೆಯುವಾಗ ತಲೆ ಸುತ್ತುವುದು – ಇವೆಲ್ಲಾ ಪ್ರಕಟಗೊಂಡಾಗ ಅವಳಿಗೆ ಎಂಆರ್‌ಐ ಮತ್ತು ಸಿ.ಟಿ. ಸ್ಕ್ಯಾನ್ ಮಾಡಿಸಲಾಯಿತು. ಆಗ ಹೈಪೋಥಲಾಮಸ್ ಗ್ರಂಥಿ ಮತ್ತು ಬೆನ್ನೆಲುಬಿನ ಮಧ್ಯೆ ಬ್ರೈನ್ ಟ್ಯೂಮರ್ ಆಗಿರುವುದು ತಿಳಿಯಿತು.

ನೀನಾಳಿಗೆ ಬ್ರೈನ್ ಸರ್ಜರಿ ನಡೆಯಿತು. ಟ್ಯೂಮರ್‌ನ ಬಯಾಪ್ಸಿಯಿಂದ, ಇದು ಸೆಕೆಂಡರಿ ಕ್ಯಾನ್ಸರ್ ಎಂಬುದು ತಿಳಿಯಿತು; ಹಾಗಾದರೆ ಪ್ರೈಮರಿ ಕ್ಯಾನ್ಸರ್ ಎಲ್ಲಿದೆ? ನಂತರ ಅವಳ ಇಡೀ ಶರೀರದ ಸ್ಕ್ಯಾನಿಂಗ್ ಮಾಡಿದಾಗ, ಅವಳ ಶ್ವಾಸಕೋಶಗಳಿಂದ ಕ್ಯಾನ್ಸರ್ ಆರಂಭವಾಗಿತ್ತು, ನಂತರ ಹರಡಿ ಮೆದುಳಿನವರೆಗೆ ತಲುಪಿತ್ತು ಎಂಬ ವಿಷಯ ತಿಳಿಯಿತು. ನೀನಾ ಚೈನ್ ಸ್ಮೋಕರ್ ಆಗಿದ್ದಳು. ನಮ್ಮಿಬ್ಬರ ನಡುವಿನ ಸಂಬಂಧ ಹದಗೆಡಲು ಸಿಗರೇಟ್ ಸಹ ಒಂದು ಕಾರಣವಾಗಿತ್ತು. ಆರಂಭದಲ್ಲಿ ಅವಳ ಸಿಗರೇಟ್ ಸೇದುವ ಚಟವನ್ನು ಸಾಮಾನ್ಯವೆಂದು ತಿಳಿದೆ, ನಂತರದಲ್ಲಿ ರೇಗಿದೆ. ಅವಳ ಬಟ್ಟೆಗಳು ಮತ್ತು ತಲೆಗೂದಲುಗಳಿಂದ ಸೂಸುತ್ತಿದ್ದ ದುರ್ಗಂಧವನ್ನು ಸಹಿಸುವುದು ಸಾಧ್ಯವಾಗುತ್ತಿರಲಿಲ್ಲ.

'ಆಗುವುದೆಲ್ಲವೂ ಒಳಿತಿಗೇ. ಅವಳೇ ನಿನ್ನಿಂದ ಬೇರೆಯಾಗಿದ್ದು ಒಳ್ಳೆಯದೇ ಆಯಿತು, ನಿನ್ನನ್ನು ಮುಕ್ತಗೊಳಿಸಿ ಹೋದಳು' ಹೀಗೆಂದು ನನ್ನ ಸ್ನೇಹಿತ ಎಂಡ್ರಿಯಾಜ್ ಹೇಳಿದ್ದ.

ನೀನಾ ಮೂರೂವರೆ ವರ್ಷಗಳ ಕಾಲ ಕ್ಯಾನ್ಸರ್‌ನೊಂದಿಗೆ ಹೋರಾಟ ನಡೆಸಿ, ಈ ಜಗತ್ತನ್ನು ತ್ಯಜಿಸಿ ಹೋದದ್ದು ನನ್ನನ್ನು ಆಘಾತಕ್ಕೊಳಪಡಿಸಿತು. ನನ್ನಿಂದ ಸಾಧ್ಯವಾದುದ್ದನ್ನೆಲ್ಲಾ ಅವಳಿಗಾಗಿ ಮಾಡಿದೆ. 'ಒಂದು ವೇಳೆ ನೀನಾಳೊಂದಿಗೆ ನನ್ನ ಬ್ರೇಕ್ ಅಪ್ ಆಗಿದ್ದರೆ, ಅವಳ ಕಾಯಿಲೆ ಮತ್ತು ಸಾವನ್ನು ನನ್ನಿಂದ ಸಹಿಸಿಕೊಳ್ಳಲಾಗುತ್ತಿರಲಿಲ್ಲ' ಎಂದು ಯೋಚಿಸುತ್ತಿರುತ್ತೇನೆ. ಮಾಜಿ ಪತಿಗೆ ಕಡೇಪಕ್ಷ ಸಾಮಾಜಿಕ ಬಾಧ್ಯತೆಗಳಿರುವುದಿಲ್ಲ. ನಾನು ನೀನಾಳಿಗೆ ಮಾಡಿದ್ದೆಲ್ಲವೂ ನನ್ನ ಸದ್ಭಾವನೆಯಷ್ಟೇ ಆಗಿತ್ತು. ಅವಳ ಬಗ್ಗೆ ನನಗೆ ಪ್ರೀತಿಯಿತ್ತು. ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಮಾಡುವ ಕರ್ತವ್ಯವನ್ನಷ್ಟೇ ನಾನು ಸಹ ಮಾಡಿದೆ. ಒಂದು ಕಾಲದಲ್ಲಿ ಅವಳು ನನ್ನ ಜೀವನ ಸಂಗಾತಿಯಾಗಿದ್ದಳು. ಅವಳು ನನಗೆ ಜೀವನದ ಅನೇಕ ಮಗ್ಗಲುಗಳನ್ನು ಪರಿಚಯಿಸಿದಳು. ನಾನು ಅವಳಿಗೆ ಕೃತಜ್ಞನಾಗಿದ್ದೇನೆ.

ಯಾರೋ ತುಂಬಾ ಹೊತ್ತಿನಿಂದ ನನ್ನನ್ನು ಹಿಂಬಾಲಿಸುತ್ತಿದ್ದಾರೆ. ನಾನೊಬ್ಬನೇ ದಾರಿಹೋಕನಲ್ಲ, ನನ್ನೊಂದಿಗೆ ಇನ್ನೊಬ್ಬನಿದ್ದಾನೆ ಎಂದು ಯೋಚಿಸಿ ಸಂತಸವಾಗುತ್ತಿದೆ. ಆದರೆ ನನ್ನನ್ನೇಕೆ ಹಿಂಬಾಲಿಸುತ್ತಿದ್ದಾನೆ ಎಂದು ಸಂದೇಹ ಮೂಡುತ್ತಿದೆ. ಮತ್ತೆ ಯಾರಾದರೂ ಕಳ್ಳನೊಬ್ಬ ನನ್ನ ಹಿಂದೆ ಬಿದ್ದಿರುವನೇ? ಆದರೆ ಈಗ ನನ್ನ ಬಳಿ ಮೊಬೈಲ್ ಹೊರತುಪಡಿಸಿ ಬೇರೇನೂ ಇಲ್ಲ. ನಾನು ಹೊರಳಿ ನೋಡಿದೆ, ಚಿಕ್ಕ ಆಕೃತಿಯೊಂದು ಹಿಂಬಾಲಿಸುತ್ತಿತ್ತು. ನಾನು ನಿಂತೆ. ಆ ಆಕೃತಿ ಸಮೀಪಕ್ಕೆ ಬಂದಾಗ, ಅದು ಓರ್ವ ಮಹಿಳೆ ಎಂಬುದು ತಿಳಿಯಿತು. ಮಹಿಳೆಯೊಬ್ಬಳು, ಈ ಸರಿ ರಾತ್ರಿಯಲ್ಲಿ, ಅದೂ ಈ ನಿರ್ಜನ ಮಾರ್ಗದಲ್ಲಿ ಒಂಟಿಯಾಗಿ ಬರುತ್ತಿರುವುದನ್ನು ಗಮನಿಸಿ ನನಗೆ ತುಂಬಾ ಆಶ್ಚರ್ಯವಾಯಿತು.

'ಹಲೋ' ನಾನು ಆ ಮಹಿಳೆಯನ್ನು ಅಭಿನಂದಿಸಿದೆ.

'ಹಲೋ' ಎಂದಳು ಮಹಿಳೆ. ಚಪ್ಪಟೆ ಮೂಗು, ಚಿಕ್ಕ ಚಿಕ್ಕ ನಯನಗಳು, ಆಕಾರ ಮತ್ತು ಬಣ್ಣದಲ್ಲಿ ಅವಳು ಚೀನಾ ದೇಶದವಳಂತೆ ಕಾಣ ಬರುತ್ತಿದ್ದಾಳೆ. ಅವಳೊಂದಿಗೆ ಮಾತನಾಡುವ ಉದ್ದೇಶದಿಂದ ಅವಳನ್ನು ರಿಂಗ್‌ಸ್ಟೇದ್ ಪ್ರದೇಶದ ಬಗ್ಗೆ ಕೇಳಿದೆ. ಮಹಿಳೆ ಹರಕುಮುರುಕು ಡೇನಿಶ್ ಮಾತನಾಡುತ್ತಿದ್ದಾಳೆ, ನಾನು ಇದುವರೆಗೆ ಈ ಭಾಷೆಯಲ್ಲಿ ಉತ್ತಮ ಪ್ರಭುತ್ವವನ್ನು ಸ್ಥಾಪಿಸಿದ್ದೇನೆ. ನಾನು ಕೇಳಿದಾಗ ಅವಳು ಹೇಳಿದಳು, 'ನಾನು ರಿಂಗ್‌ಸ್ಟೇದ್‌ನಲ್ಲಿ ಮೋಟರವಾಯ್ ಆಚೆಗೆ ವಾಸಿಸುತ್ತೇನೆ. ಈಗ ರಿಂಗ್‌ಸ್ಟೇದ್‌ನ ಔಟ್‌ಲೆಟ್‌ನಲ್ಲಿ ಶ್ರೀಮಂತರೊಬ್ಬರ ಮನೆಯಲ್ಲಿ ಪಾರ್ಟಿಯಿತ್ತು. ಅಲ್ಲಿಂದ ಕೆಲಸ ಮುಗಿಸಿಕೊಂಡು ನನ್ನ ಮನೆಗೆ ಮರಳಿ ಹೋಗುತ್ತಿದ್ದೇನೆ.'

'ಈ ನಡುರಾತ್ರಿಯಲ್ಲಿ ಈ ಕಾಡಿನಿಂದ ಹಾದು ಹೋಗಲು ನಿನಗೆ ಭಯವಾಗುವುದಿಲ್ಲವೇ?' ಎಂದು ಕೇಳಿದಾಗ ಅವಳು ಹೇಳಿದಳು,

'ಈಗ ನನ್ನ ಮತ್ತು ನನ್ನ ಮಗನಿಗೆ ಏನಾಗುವುದೋ ಎಂದು ಭಯವಾಗುತ್ತಿದೆ. ನಾವೇನು ತಿನ್ನುವುದು? ಮಗ ಓದುವುದು ಹೇಗೆ?'

ನಂತರ ಅವಳು ತನ್ನ ಕಥೆಯನ್ನು ಹೇಳಿದಳು.

(ಸಶೇಷ)